''ಎಲ್ಲಾದ್ರೂ ಯುದ್ಧ ಆದರೆ ಒಂದೇ ಮನೆಯ ಹಲವರು ಸಾಯಬಾರದಲ್ಲ, ಆ ಕಾರಣಕ್ಕೂ ಇರಬಹುದು'' ಎಂದೆ ನಾನು.

''ಹೇ... ಆ ಹೆದರಿಕೆ ನಮಗಿಲ್ಲ. ನಮ್ಮ ಮಾಮೂಲಿ ವೈರಿ ನಿಮ್ಮ ಹಿಂದೂಸ್ತಾನ. ನೀವು ನೀವಾಗಿ ಯುದ್ಧಕ್ಕೆ ಬರುವವರಲ್ಲ. ಕಾಲುಕೆರೆದು ಜಗಳಕ್ಕೆ ಕರೆದರೆ ಮಾತ್ರ ಕೆರಳಿ ಹೊಡೆಯಲು ಬರುವವರು. ಅದರ ಹಸಿ ಬಿಸಿ ಕೂಡ ಎರಡು ಮೂರು ದಿನ ಮಾತ್ರ. ಅದು ನಮ್ಮವರಿಗೆ ಗೊತ್ತಿದೆ. ಅದಕ್ಕೇ ನಮ್ಮ ಮಿಲಿಟ್ರಿ ನೇರವಾಗಿ ಯುದ್ಧಕ್ಕೆ ಆಹ್ವಾನ ಮಾಡುವುದಿಲ್ಲ. ತಲೆಕೆಟ್ಟು ಸಾಯಲು ಸಿದ್ಧವಾಗಿ ಗಡಿಯವರೆಗೆ ಬರುವ ಯುವಕರನ್ನು ನಿಮ್ಮ ಮೇಲೆ ಛೂ ಬಿಡುವುದು ಮಾತ್ರ'' ಅನ್ನುತ್ತ ಮನಸಾರೆ ನಕ್ಕ.

''ಸುಮ್ಮನೆ ನಿಮ್ಮ ಮಿಲಿಟ್ರಿಗೆ ಆಟ, ಎರಡೂ ಕಡೆ ಜನರು, ಜವಾನರು ಸಾಯ್ತಾರೆ. ಯಾರು ಹೊಣೆ?'' ಎಂದೆ ನಾನು ಕೋಪದಿಂದ.

ನನಗೆ ಕೋಪ ಬಂದಿದೆ ಎಂದರಿತ ಆತ ಸ್ವಲ್ಪ ಸಮಯ ಸುಮ್ಮನಿದ್ದ. ಆದರೆ, ಉದ್ದಕ್ಕೂ ಸುಮ್ಮನಿರುವ ಜಾಯಮಾನದವನಲ್ಲ ತಾನೆ.

''ಎಲ್ಲ ರಾಜಕೀಯ'' ಪುನಃ ಶುರು ಮಾಡಿದ. ''ಇಲ್ಲಿ ಗಲ್ಫಿನಲ್ಲಿ ನೋಡು ಎಷ್ಟು ದೇಶದವರು ಬಂದು ಇಲ್ಲಿ ಹಾಯಾಗಿ ನೆಲೆಸಿದ್ದಾರೆ. ಏನಾದರೂ ಜಗಳವಿದೆಯಾ?'' ಮಾತು ತಿರುಗಿಸಿದ.

ಗಲ್ಫ್ ರಾಷ್ಟ್ರಗಳಲ್ಲಿ ಎಲ್ಲ ದೇಶದವರೂ ಇದ್ದಾರೆ. ಭಾರತ ಪಾಕಿಸ್ತಾನ ಮತ್ತು ಇತರ ಏಷ್ಯಾ ದೇಶಗಳ ಜನರದ್ದೇ ಕಾರುಬಾರು. ಪಾಕಿಸ್ತಾನದವರು ನಮ್ಮೊಂದಿಗೆ ಹೇಗೆ ವ್ಯವಹರಿಸುತ್ತಾರೆ ಎನ್ನುವ ಕುತೂಹಲ ನನಗೂ ಇತ್ತು. ಕೇಳಿದ್ದಕ್ಕೆ ಮಾವ, ''ಏನಿಲ್ಲ, ಅವರೆಲ್ಲ ನಮ್ಮ ಹಾಗೆಯೇ... ನಮ್ಮ ಗಲಾಟೆ ಏನಿದ್ದರೂ ದೆಹಲಿ ಮತ್ತು ಇಸ್ಲಮಾಬಾದ್ ಪಟ್ಟಣಗಳಲ್ಲಿ ಇತ್ಯರ್ಥವಾಗಬೇಕಾದದ್ದು. ಗಲ್ಫಿನಲ್ಲಿ ಇದರ ಸುದ್ದಿ ತೆಗೆಯಬಾರದು ಎನ್ನುವ ಸಂಯಮವನ್ನು ಭಾರತೀಯರೂ ಪಾಕಿಸ್ತಾನಿಗಳೂ ಪಾಲಿಸಿಕೊಂಡು ಬಂದಿರುವುದರಿಂದ ಎಲ್ಲೂ ಸಮಸ್ಯೆಗಳು ಉಂಟಾದದ್ದಿಲ್ಲ'' ಎಂದಿದ್ದರು.

''ಭಾರತ ದೊಡ್ಡ ದೇಶ ಅಂತ ಹೇಳುವುದನ್ನು ಕೇಳಿದ್ದೇನೆ. ನಮ್ಮ ಪಾಕಿಸ್ತಾನವೂ ದೊಡ್ಡ ದೇಶವೇ. ನಾನು ಲಾಹೋರ್, ಕರಾಚಿ ಬಿಟ್ಟು ಬೇರೆ ಪಟ್ಟಣಗಳನ್ನು ನೋಡಿಲ್ಲ. ನೋಡಬೇಕೆಂಬ ಆಸೆಯಿತ್ತು. ಹಣ ಇರಲಿಲ್ಲ. ಇಲ್ಲಿಗೆ ಬಂದಮೇಲೆ ಹೇಗೂ ಇನ್ನು ಸಾಧ್ಯವಿಲ್ಲ. ರಜೆ ಎಲ್ಲಿ ಸಿಗುತ್ತೆ! ನೀನು ಭಾರತ ಎಷ್ಟು ಸುತ್ತಿದ್ದೀ? ಮುಂಬೈ, ದೆಹಲಿ ನೋಡಿದ್ದೀಯಾ?'' ಕೇಳಿದ ಹಸನ್.

''ನೋಡಿಲ್ಲ. ನಮ್ಮದೇನಿದ್ದರೂ ಬೆಂಗಳೂರು. ಒಮ್ಮೆ ಚೆನ್ನೈ ಅಂದ್ರೆ ಮದ್ರಾಸಿಗೂ ಹೋಗಿದ್ದೆ'' ಎಂದೆ ನಾನು.

''ಹೋ ಹೋ ನಿಮ್ಮದು ಆ ಕಡೆಯ ಭಾರತ ಅಲ್ವಾ? ನೀವು ನಮ್ಮ ಮಿಲಿಟರಿಗೆ ಹೆದರ ಬೇಕೆಂದಿಲ್ಲ ಅಲ್ಲಿಯವರೆಗೆ ಅಷ್ಟು ದೂರ ನಾವು ಬರುವುದಿಲ್ಲ'' ಹೇಳಿ ಜೋರಾಗಿ ನಕ್ಕ ಹಸನ್.

